ಶಾಲಾ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
**Karnataka School Quality Assessment & Accreditation Council**
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080-23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ4/5, 8 ಮತ್ತು 9ನೇ.ಮೌ/06/2023-24 ದಿನಾಂಕ:22.03.2024

## ಜ್ಞಾಪನ

ವಿಷಯ:- 2023-24ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಮುಂದೂಡಲಾಗಿದ್ದ ಮೌಲ್ಯಾಂಕನವನ್ನು ನಡೆಸುವ ಬಗ್ಗೆ.

ಉಲ್ಲೇಖ :-
1. ಸರ್ಕಾರದ ಆದೇಶ ಸಂಖ್ಯೆ ಇಪಿ 209 ಎಸ್‌ಎಲ್‌ಬಿ 2023, ದಿನಾಂಕ: 16.11.2023
2. ಈ ಕಛೇರಿ ಮಾರ್ಗಸೂಚಿ ಸಮಸಂಖ್ಯೆ ದಿನಾಂಕ: 22.02.2024
3. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 12.03.2024
4. ಘನ ಉಚ್ಚ ನ್ಯಾಯಾಲಯದ WA NO : 379/2024, 380/2024 ಪ್ರಕರಣದಲ್ಲಿ ನೀಡಿರುವ ತೀರ್ಪಿನನ್ವಯ

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2) ರನ್ವಯ 2023-24ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ-2 (SA-2) ಕಾರ್ಯವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಸಲಾಗುತ್ತಿದೆ.

ಸದರಿ ಮೌಲ್ಯಾಂಕನವನ್ನು ಹೈಕೋರ್ಟ್ ಏಕಸದಸ್ಯ ಪೀಠವು ರದ್ದುಪಡಿಸಿ ನೀಡಿದ್ದ ತೀರ್ಪಿಗೆ ವಿಭಾಗೀಯ ಪೀಠವು ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ. ಸದರಿ ವಿಭಾಗೀಯ ಪೀಠವು ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಘನ ಸರ್ವೋಚ್ಚ ನ್ಯಾಯಾಲಯವು ರದ್ದುಪಡಿಸಿತ್ತು ಹಾಗಾಗಿ 5ನೇ ತರಗತಿಯ ವಿದ್ಯಾರ್ಥಿಗಳಿಗೆ ದಿನಾಂಕ:13.03.2024 ರಿಂದ 14.03.2024 ರವರೆಗೆ ಹಾಗೂ 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ದಿನಾಂಕ:13.03.2024 ರಿಂದ 16.03.2024 ರವರೆಗೆ ನಡೆಸಬೇಕಿದ್ದ ಮೌಲ್ಯಾಂಕನವನ್ನು ಉಲ್ಲೇಖ(3) ರ ಪತ್ರದಂತೆ ಮುಂದೂಡಲಾಗಿತ್ತು.

ಮುಂದುವರೆದು, ಉಲ್ಲೇಖ(4) ರ ಘನ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಮೌಲ್ಯಾಂಕನವನ್ನು ನಡೆಸಲು ಅವಕಾಶ ಕಲ್ಪಿಸಿ ತೀರ್ಪು ನೀಡಿದ್ದು, ಅದರಂತೆ 5, 8 ಮತ್ತು 9ನೇ ತರಗತಿಗಳಿಗೆ ಉಲ್ಲೇಖ(3) ರಲ್ಲಿ ಮುಂದೂಡಲಾಗಿದ್ದ ವಿಷಯಗಳ ಪರೀಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿನ ವೇಳಾಪಟ್ಟಿಯನುಸಾರ ನಡೆಸಲಾಗುತ್ತಿದೆ. ಅದರಂತೆ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು/ಪ್ರಾಂಶುಪಾಲರುಗಳಿಗೆ ಮೌಲ್ಯಾಂಕನವನ್ನು ನಡೆಸುವಂತೆ ಎಲ್ಲಾ ಬ್ಲಾಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು (ಆಡಳಿತ) ರವರು ಸೂಚಿಸಿ ಸೂಕ್ತ ಕ್ರಮವಹಿಸುವುದು ಮತ್ತು ಸದರಿ ಮೌಲ್ಯಾಂಕನದ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸುತ್ತೋಲೆಯಲ್ಲಿ ಮಾಹಿತಿ ನೀಡಲಾಗುವುದು.

Manjushree

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ
ಮತ್ತು ಮೌಲ್ಯನಿರ್ಣಯ ಮಂಡಲಿ
ಬೆಂಗಳೂರು

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-**
1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರಿಗೆ.
2. ರಾಜ್ಯದ ಎಲ್ಲಾ 5, 8 ಮತ್ತು 9ನೇ ತರಗತಿ ಮೌಲ್ಯಾಂಕನದ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ.
4. ಶಾಲಾ ಮುಖ್ಯ ಶಿಕ್ಷಕರು/ಪ್ರಾಂಶುಪಾಲರು (ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ).

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ,**
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ರವರಿಗೆ,
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ,
3. ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ರವರಿಗೆ.
4. ಮಾನ್ಯ ಅಧ್ಯಕ್ಷರ ಆಪ್ತ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು ರವರಿಗೆ,
5. ಕಛೇರಿ ಪ್ರತಿ.

# ಅನುಬಂಧ-1

## ಮಾರ್ಚ್ -2024ರ 5ನೇ ತರಗತಿ ಮೌಲ್ಯಾಂಕನದ (SA-2) ಪರಿಷ್ಕೃತ ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| 25.03.2024 (ಸೋಮವಾರ) | **ಕೋರ್ ವಿಷಯ:** ಪರಿಸರ ಅಧ್ಯಯನ | ಮ.2.30 ರಿಂದ 4.30 | 2.00 ಗಂಟೆ | 40 |
| 26.03.2024 (ಮಂಗಳವಾರ) | **ಕೋರ್ ವಿಷಯ:** ಗಣಿತ<br>ಗಣಿತ (Bilingual) | ಬೆ.10.00 ರಿಂದ 12.00 | 2.00 ಗಂಟೆ | 40<br>40 |

## ಮಾರ್ಚ್ -2024ರ 8ನೇ ತರಗತಿ ಮೌಲ್ಯಾಂಕನ (SA-2) ಕಾರ್ಯದ ಪರಿಷ್ಕೃತ ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| 25.03.2024 (ಸೋಮವಾರ) | **ತೃತೀಯ ಭಾಷೆ** | ಮ.2.30 ರಿಂದ 5.00 | 2.30 ಗಂಟೆ | 50 |
| 26.03.2024 (ಮಂಗಳವಾರ) | **ಕೋರ್ ವಿಷಯ:** ಗಣಿತ | ಬೆ.10.00 ರಿಂದ 12.30 | 2.30 ಗಂಟೆ | 50 |
| 27.03.2024 (ಬುಧವಾರ) | **ಕೋರ್ ವಿಷಯ:** ವಿಜ್ಞಾನ | ಮ.2.30 ರಿಂದ 5.00 | 2.30 ಗಂಟೆ | 50 |
| 28.03.2024 (ಗುರುವಾರ) | **ಕೋರ್ ವಿಷಯ:** ಸಮಾಜ ವಿಜ್ಞಾನ | ಬೆ.10.00 ರಿಂದ 12.30 | 2.30 ಗಂಟೆ | 50 |

## ಮಾರ್ಚ್ -2024ರ 9ನೇ ತರಗತಿ ಮೌಲ್ಯಾಂಕನ (SA-2) ಕಾರ್ಯದ ಪರಿಷ್ಕೃತ ವೇಳಾಪಟ್ಟಿ

| ದಿನಾಂಕ ಮತ್ತು ವಾರ | ವಿಷಯ | ಸಮಯ | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|
| 25.03.2024 (ಸೋಮವಾರ) | **ತೃತೀಯ ಭಾಷೆ** | ಮ.2.00 ರಿಂದ 5.00 | 3.00 ಗಂಟೆ | 80 |
| | **NSQF** | ಮ.2.00 ರಿಂದ 4.15 | 2.15 ಗಂಟೆ | 60 |
| 26.03.2024 (ಮಂಗಳವಾರ) | **ಕೋರ್ ವಿಷಯ:** ಗಣಿತ | ಬೆ.10.00 ರಿಂದ 1.15 | 3.15 ಗಂಟೆ | 80 |
| 27.03.2024 (ಬುಧವಾರ) | **ಕೋರ್ ವಿಷಯ:** ವಿಜ್ಞಾನ | ಮ.2.00 ರಿಂದ 5.15 | 3.15 ಗಂಟೆ | 80 |
| 28.03.2024 (ಗುರುವಾರ) | **ಕೋರ್ ವಿಷಯ:** ಸಮಾಜ ವಿಜ್ಞಾನ | ಬೆ.10.00 ರಿಂದ 1.15 | 3.15 ಗಂಟೆ | 80 |

- ದಿನಾಂಕ: 25.03.2024 ರಿಂದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಪ್ರಾರಂಭವಾಗುತ್ತಿದ್ದು, ಎಸ್.ಎಸ್.ಎಲ್.ಸಿ ಪರೀಕ್ಷೆಗಳಿರುವ ದಿನಾಂಕ:**25.03.2024** ರ ಸೋಮವಾರ ಮತ್ತು **27.03.2024** ರ ಬುಧವಾರದಂದು ಮಧ್ಯಾಹ್ನದ ಅವಧಿಯಲ್ಲಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಇಲ್ಲದಿರುವ ದಿನಾಂಕ:**26.03.2024** ರ ಮಂಗಳವಾರ ಮತ್ತು **28.03.2024** ರ ಗುರುವಾರದಂದು ಬೆಳಗಿನ ಅವಧಿಯಲ್ಲಿ 5, 8 ಮತ್ತು 9ನೇ ತರಗತಿಯ ಮೌಲ್ಯಾಂಕನವನ್ನು ನಡೆಸಲಾಗುತ್ತಿದೆ.

Manjunath

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ
ಮತ್ತು ಮೌಲ್ಯನಿರ್ಣಯ ಮಂಡಲಿ
ಬೆಂಗಳೂರು